ರೂಪಾಯಿಗಳು ಆದಾಯ ಬರುತ್ತದೆಂದು ಹೇಳುತ್ತಾರೆ. ಮರಗಳನ್ನು ನೆಡುವುದಕ್ಕೆ ಹೊಸದಾಗಿ ಖರ್ಚು ಮಾಡುವುದು ಕೇವಲ 10 ಕೋಟಿ ರೂಪಾಯಿಗಳು. 43 ಕೋಟಿ ರೂಪಾಯಿ ಆದಾಯ ಬಂದು 10 ಕೋಟಿ ರೂಪಾಯಿಗಳು ಮಾತ್ರ ಖರ್ಚು ಮಾಡುತ್ತಾರೆ. ಇವತ್ತು ಕಾಡು ನಾಶವಾಗಿ ಮಳೆ ಬರದೆ ತೊಂದರೆಯಾಗಿರುವಾಗ 43 ಕೋಟಿ ರೂಪಾಯಿ ಆದಾಯ ತೆಗೆದುಕೊಂಡು ಬರೀ 10 ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದರೆ ಎಕಲಾಜಿಕಲ್ ಬ್ಯಾಲನ್ಸ್ ಅನ್ನು ಸರ್ಕಾರ ಪರಿಗಣನೆ ಮಾಡಿದಂತಾಗುವುದಿಲ್ಲ.

ಅಧ್ಯಕ್ಷರು.— 31 ಸಾವಿರ ಎಕರೆಗೆ ಮರ ಹಾಕಿದ್ದೇವೆ ಎಂದು ಹೇಳಿದ್ದಾರೆ. ಅದನ್ನು ಬಿಟ್ಟು ಬಿಡುತ್ತೀರಲ್ಲ.

ಶ್ರೀ ಪಿ. ರಾಮಚಂದ್ರರಾವ್.— ಈಗ ಕಾಡಿನ ರಕ್ಷಣೆ ಫಾರೆಸ್ಟರ್ ಮತ್ತು ರೇಂಜರ್ ಅವರಿಂದ ಆಗುತ್ತಿದೆ. ಗಿರಿಜನರು ಕಾಡಿನ ಪ್ರೇಮಿಗಳಾಗಿದ್ದಾರೆ. ಅವರಿಗೆ ಕಾಡಿನ ಸುತ್ತ ನೆಲೆಸಲು ಅವಕಾಶ ಮಾಡಿಕೊಟ್ಟು ಅವರಿಗೆ ಜವಾಬ್ದಾರಿಯನ್ನು ವಹಿಸಿದರೆ ಕಾಡಿನ ರಕ್ಷಣೆ ಆಗುವುದಕ್ಕೆ ಅವಕಾಶವಿದೆ. ಈ ಬಗ್ಗೆ ಏನಾದರೂ ಯೋಚನೆ ಮಾಡುತ್ತೀರಾ ?

ಅಧ್ಯಕ್ಷರು.— ಬೇಡಿಕೆ ಮೇಲೆ ಈ ಬಗ್ಗೆ ಸಲಹೆ ಕೊಡಿ. ಪ್ರಶ್ನೋತ್ತರ ಕಾಲದಲ್ಲಿ ಬೇಡ.

ಶ್ರೀ ಬಿ. ಎ. ಜೀವಿಜಯ :— ಅಧ್ಯಕ್ಷರೇ, 24,897 ಹೆಕ್ಟೇರ್ ಅರಣ್ಯವನ್ನು ಕಡಿಯಲಾಯಿತು. ಅಲ್ಲಿ ಕಾಂಟ್ರಡಿಕ್ಷನ್ ಆಗಿದೆ ಎಂದು ಹೇಳಿದರು. ಹಾಗೂ ಅರಣ್ಯ ಬೆಳೆಸಲು ಕಡಿಮೆ ಖರ್ಚು ಮಾಡಲಾಗಿದೆ ಎಂದು ಅವರು ಹೇಳಿದರು. ಹಾಗೂ 30,330 ಹೆಕ್ಟೇರ್‌ನಲ್ಲಿ ಏನೂ ಕಾಡೇ ಇಲ್ಲ ಎಂದರು. ಇವತ್ತು ಬೆಳೆಸಿರತಕ್ಕ ಕಾಡಿನಲ್ಲಿ ಶೇಕಡಾ 30ರಷ್ಟು ನಷ್ಟವಾಗಿದ್ದು ಸುಮಾರು 21,230 ಹೆಕ್ಟೇರ್ ಪ್ರದೇಶದಲ್ಲಿ ಮರಗಳು ಉಳಿದಿವೆ. ಎಂದು ಹೇಳಿದ್ದೇನೆ. ಇವತ್ತು ಕಾಡನ್ನು ಬೆಳೆಸತಕ್ಕ ದೃಷ್ಟಿಯಿಂದ ಯೋಜನೆ ಹಾಕಿಕೊಂಡು ಎಕಲಾಜಿಕಲ್ ಇಂಬ್ಯಾಲೆನ್ಸ್‌ನ್ನು ಸರಿಮಾಡಲು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎನ್. ಜಿ. ನಾಯಕ್.— ಅರಣ್ಯ ಪ್ರದೇಶವನ್ನು ಗುತ್ತಿಗೆಗೆ ಪಡೆದಿರುವವರು ಲೆಕ್ಕಕಿಂತ ಹೆಚ್ಚು ಮರಗಳನ್ನು ಕಡಿದು ಮೋಸ ಮಾಡುತ್ತಿದ್ದಾರೆಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎ. ಜೀವಿಜಯ.— ನಾವು ಕೈಗಾರಿಕೆಗಳಿಗೆ ಕೊಟ್ಟ ಅರಣ್ಯದಲ್ಲಿ ಏನು ಹೆಕ್ಟೇರಿನಲ್ಲಿ 10–15–20 ಮರಗಳನ್ನು ಕಡಿಯಲು ಪರವಾನಗಿಯನ್ನು ಕೊಡಲಾಗಿತ್ತೋ ಆದನ್ನು ಬದಲಾವಣೆ ಮಾಡಿ ಪರಿಸರದಲ್ಲಿ ಬದಲಾವಣೆ ಆಗಬಾರದು ಎಂಬ ದೃಷ್ಟಿಯಿಂದ ಒಂದು ಹೆಕ್ಟೇರಿನಲ್ಲಿ ಕೇವಲ 5 ಮರಗಳನ್ನು ಕಡಿಯಬೇಕೆಂದು ಕಾನೂನನ್ನು ಮಾಡಿದ್ದೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.— ನೀವು ಎಷ್ಟೇ ಕಡಿಮೆ ಪ್ರಮಾಣದಲ್ಲಿ ನಿಗದಿ ಮಾಡಿದರೂ ಕೂಡಾ ಅರಣ್ಯ ನಾಶ ಆಗುವುದು ಒಂದೇ ಕಾರಣದಿಂದಲ್ಲ. ಈಗ ಅವರು ಒಂದು ಮರವನ್ನು ಕಡಿಯುವಾಗ ಅದರ ಪಕ್ಕದಲ್ಲಿರುವ ಗಿಡಗಳೂ ಸಹ ನಾಶವಾಗುತ್ತವೆ. ಹಾಗೂ ಅವನ್ನು ಸಾಗಿಸುವಾಗ ಆ ದಾರಿಯಲ್ಲಿನ ಮರಗಳೂ ನಾಶವಾಗುತ್ತವೆ. ತಾವು ಏನು ಎಷ್ಟು ಮರಗಳನ್ನು ಕಡಿಯಬೇಕೆಂದು ನಿಗದಿ ಮಾಡಿದ್ದಿರೋ ಅದರ ಮೂರರಷ್ಟು ಮರಗಳು ನಾಶವಾಗುತ್ತವೆ. ಆದುದರಿಂದ ಹೇಳುತ್ತೇನೆ. ಯಾವ ರೈತ ತನ್ನ ಸ್ವಂತ ಜಾಗದಲ್ಲಿ ಒಂದು ಮರವನ್ನು ಕಡಿದೇ ಒಂದು ಗಿಡವನ್ನು ನೆಡಬೇಕೆಂದು ಕಾನೂನು ಮಾಡಿದ್ದೀರೋ ಅದೇ ರೀತಿ ಇವರುಗಳು ಕಡಿದ ಮರಗಳಷ್ಟು ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟು ಮರ ಕಡಿಯುವ ವ್ಯವಸ್ಥೆಯನ್ನು ಏಕೆ ಮಾಡಬಾರದು ?

ಶ್ರೀ ಬಿ. ಎ. ಜೀವಿಜಯ.— ಮಾನ್ಯ ಸದಸ್ಯರ ಸಲಹೆಯನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ.

ವಿಷಯ : ರಾಜ್ಯದಲ್ಲಿ ವಾಹನ ಸಂಪರ್ಕದ ರಸ್ತೆಯ ಕೊರತೆಯಿರುವ ಗ್ರಾಮಗಳ ಕುರಿತು.

ಪ್ರ. 197 (13) ಶ್ರೀ ವಿ. ಎಸ್ ಆಚಾರ್ಯ (ಉಡುಪಿ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಎಷ್ಟು ಗ್ರಾಮಗಳಿಗೆ ವಾಹನ ಸಂಪರ್ಕದ ರಸ್ತೆಯ ಕೊರತೆ ಇದೆ;

(ಆ) ಈ ಬಗ್ಗೆ ವಿಶೇಷ ಯೋಜನೆಯನ್ನೇನಾದರೂ ಸರ್ಕಾರದವರು ರೂಪಿಸಿದ್ದಾರೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) 13,106 ಗ್ರಾಮಗಳು.

(ಆ) ಹೌದು, ರೂಪಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.— ಅಧ್ಯಕ್ಷರೇ, ಈ ಉತ್ತರಕ್ಕೆ ಪೂರಕವಾಗಿ ಮಾನ್ಯ ಸದಸ್ಯರು ಮತ್ತೆ ಸ್ಪಷ್ಟೀಕರಣ ಕೇಳಲು ಕೆಲವು ಮಾಹಿತಿಗಳನ್ನು ಅವರಿಗೆ ಹೇಳಬಯಸುತ್ತೇನೆ. 1979ರಲ್ಲಿ ರಾಜ್ಯದ ಒಟ್ಟು 26,871 ಹಳ್ಳಿಗಳ ಪೈಕಿ 7,721 ಹಳ್ಳಿಗಳಿಗೆ ಸರ್ವ ರೂಪದ ರಸ್ತೆಗಳಿದ್ದು ಉಳಿದ ಹಳ್ಳಿಗಳಿಗೆ ಸರ್ವ ರೂಪದ ಹಳ್ಳಿಗಳು ಇರುವುದಿಲ್ಲ. ಇದಕ್ಕಾಗೇ ಒಂದು ಮಾಸ್ಟರ್ ಪ್ಲಾನನ್ನು ಮಾಡಿದರು. ಆವತ್ತಿನ ದಿವಸ ಅದಕ್ಕೆ 949 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ಮಾಡಲಾಗಿದ್ದು ಇವತ್ತಿನ ದರ ದಲ್ಲಿ ಇದಕ್ಕೆ ಸುಮಾರು 1,100 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇದಕ್ಕಾಗಿ ನಾವು ಈಗ ಖರ್ಚು ಮಾಡಿರತಕ್ಕದ್ದು 4 ಕೋಟಿ ರೂಪಾಯಿಗಳು. ನಂತರ ಕಚ್ಚಾ ರಸ್ತೆಗಳು ಇರುವಂತಹ 11,500 ಗ್ರಾಮಗಳು ಇವೆ. ಯಾವ ಕಚ್ಚಾ ರಸ್ತೆಗಳೂ ಇಲ್ಲದಂತಹ 1,606 ಗ್ರಾಮಗಳಿವೆ. ಈ 1,606 ಗ್ರಾಮಗಳಿಗೆ ಆದ್ಯತೆ ಕೊಟ್ಟು ರಸ್ತೆಗಳನ್ನು ಮಾಡುವುದಕ್ಕೆ ಕನಿಷ್ಟಪಕ್ಷ 50 ಕೋಟಿ ರೂಪಾಯಿಗಳು ಬೇಕಾಗುತ್ತವೆ. ಇನ್ನು ಕಚ್ಚಾ ರಸ್ತೆಗಳು ಏನಿವೆ ಅವುಗಳಲ್ಲಿ ವಾಹನಗಳು ಓಡಾಡುವಂತೆ ರಸ್ತೆಗಳನ್ನು ನಿರ್ಮಾಣ ಮಾಡಬೇಕಾದರೆ ಕನಿಷ್ಟಪಕ್ಷ 50 ಕೋಟಿ ರೂಪಾಯಿ ಬೇಕಾಗುತ್ತದೆ. ಹೀಗೆ ಒಟ್ಟು 100 ಕೋಟಿ ರೂಪಾಯಿ ಬೇಕಾಗುತ್ತದೆ.

ಶ್ರೀ: ವಿ. ಎಸ್. ಆಚಾರ್.— ಇವತ್ತು ಗ್ರಾಮಗಳಲ್ಲಿ ನಾಗರೀಕತೆ ಬೆಳೆಯಬೇಕಾದರೆ ಅಲ್ಲಿಗೆ ಸಂಪರ್ಕ ವ್ಯವಸ್ಥೆ ಇದ್ದು ಅಲ್ಲಿಗೆ ವಾಹನಗಳು ಓಡಾಡಬೇಕಾಗುತ್ತದೆ. ಇವತ್ತು ತಾವು ಕೊಟ್ಟಿರುವ ಹೇಳಿಕೆ ಪ್ರಕಾರ ರಾಜ್ಯದ ಅರ್ಧ ಭಾಗದಷ್ಟು ಹಳ್ಳಿಗಳಿಗೆ ಇವತ್ತು ವಾಹನಗಳು ಓಡಾಡುವಂಥ ರಸ್ತೆಗಳು ಇಲ್ಲ. ಹಾಗೂ ತಾವು ಏನು ರಸ್ತೆಗಳನ್ನು ನಿರ್ಮಾಣ ಮಾಡುತ್ತೀರಿ ಅದರ ಬಗ್ಗೆ ಏನಾದರೂ ವರ್ಗೀ ಕರಣ ಮಾಡಿದ್ದೀರಾ ? ಎಂದರೆ ಇಂತಿಷ್ಟು ಜನಸಂಖ್ಯೆ ಇರುವ ಹಳ್ಳಿಗಳ ರಸ್ತೆಗಳು ಎಂದು ಅಥವಾ ಇಷ್ಟು ದೂರ ಎಂದರೆ 1 ಕಿ.ಮೀ., 2 ಕಿ.ಮೀ. ರಸ್ತೆಗಳು ಎಂದು ವರ್ಗೀಕರಣ ಮಾಡಿದ್ದೀರಾ ? ಅಥವಾ ಜಿಲ್ಲಾ ವಾರು ವಿಂಗಡಣೆ ಮಾಡಿದ್ದೀರಾ ? ಅಥವಾ ರಸ್ತೆಗಳಿಗೆ ಅಡ್ಡಲಾಗಿ ಬರುವ ನದಿ, ತೊರೆಗಳ ರಸ್ತೆಗಳ ಬಗ್ಗೆ ಬೇರೆ ವಿಂಗಡಣೆ ಮಾಡಿದ್ದೀರಾ ? ತಾವು ಏನು ಒಂದು 50 ಕೋಟಿ ರೂಪಾಯಿಗಳ ಲೆಕ್ಕ ಹಾಕಿದ್ದೀರಿ ಇವರಲ್ಲಿ ವರ್ಗೀಕರಣ ಮಾಡಿದ್ದೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಇದರಲ್ಲಿ ಕ್ಯಾಟಗರೀ ಇದ್ದೇ ಇರುತ್ತದೆ. ಇವರಲ್ಲಿ ರಸ್ತೆಯ ಉದ್ದ ಯಾವ ರಸ್ತೆ ಎಂಬುದು ಬೇಕಾಗಿಲ್ಲ. ಅದು 1 ಕಿಲೋಮೀಟರ್ ರಸ್ತೆ ಆಗಿರಬಹುದು, ಅಥವಾ 5 ಕಿಲೋಮೀಟರ್ ರಸ್ತೆ ಆಗಿರಬಹುದು. ಒಂದು ಕಡೆ 1 ಕಿಲೋಮೀಟರ್ ರಸ್ತೆಯಿಂದ ಒಂದು ಗ್ರಾಮಕ್ಕೆ ರಸ್ತೆ ಸಂಪರ್ಕ ಸಿಗುತ್ತದೆ. ಇವತ್ತು ಯಾವುದೇ ಸಂಪರ್ಕ ಇಲ್ಲದಂತಹ 16,006 ಗ್ರಾಮಗಳು ಇರುತ್ತವೆ. ಇವುಗಳನ್ನು ನಾವು ತೆಗೆದುಕೊಂಡು ಮಾಡಬೇಕಾಗುತ್ತದೆ. ನಾನು ಸ್ವಲ್ಪ ಕಾಠಿಣ್ಯವಾಗಿ ಹೇಳಿದರೆ ಯಾರೂ ಬೇಸರಪಟ್ಟುಕೊಳ್ಳಬಾರದು. ಇವತ್ತು ನದಿಗಳ ಜಾಗದಲ್ಲಿ ಫೆರ್ರಿ ಸರ್ವೀಸ್ ಇರುತ್ತದೆ. ಅಲ್ಲಿ ಒಬ್ಬ ಖಾಸಗಿಯವರು ಫೆರ್ರಿ ಸರ್ವೀಸ್ ಮಾಡುತ್ತಿದ್ದಾಗ ಅದರಲ್ಲಿ 2 ರೂಪಾಯಿ ಕೊಟ್ಟು ಜನ ಪ್ರಯಾಣ ಮಾಡುತ್ತಾರೆ. ಅದೇ ಜಾಗದಲ್ಲಿ ಸೇತುವೆ ಕಟ್ಟಿ ಅದರ ಮೇಲೆ ಓಡಾಡಲು ಹಣ ಪಡೆಯಲು ಹೋದಾಗ ಚಳುವಳಿ ಮಾಡತಕ್ಕ ಜನ ಇದ್ದಾರೆ. ಎಲ್ಲಿಯವರೆಗೆ ಜನಗಳ ಮನೋಭಾವ ಬದಲಾವಣೆ ಆಗುವುದಿಲ್ಲವೋ ಅಲ್ಲಿಯವರೆಗೆ ಕೆಲಸಗಳು ಸುಗಮವಾಗುವುದಿಲ್ಲ.

ಶ್ರೀ ವಿ. ಎಸ್. ಆಚಾರ್.— ಏನು 1,100 ಕೋಟಿ ರೂಪಾಯಿಗಳ ಯೋಜನೆ ಇದು ಇವೆ. ಇದಕ್ಕೆ ಬಹಳ ವರ್ಷಗಳು ಹಿಡಿಯುತ್ತದೆ. ಆದ್ದರಿಂದ ಯಾವ ಯಾವ ಕಡೆಗಳಲ್ಲಿ ಅರ್ಧ ಅಥವಾ 1 ಕಿ.ಮೀ. ರಸ್ತೆ ಮಾಡಿದರೆ ಸಂಪರ್ಕ ಏರ್ಪಡುತ್ತದೋ ಅಲ್ಲಿಗೆ ಆದ್ಯತೆ ಕೊಟ್ಟು ಒಂದೆರಡು ವರ್ಷದ ಅವಧಿಯಲ್ಲಿ ಮಾಡಿ ಮುಗಿಸಲು ಪ್ರಯತ್ನಪಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಇಲ್ಲಿ ಇರುವ ಕಷ್ಟ ಏನು ಎಂದರೆ 1 ಕಿ.ಮೀ. ರಸ್ತೆ ಆಗಬೇಕಾ ಗಿರುವ ಕಡೆಗಳಲ್ಲಿನ ಹಳ್ಳಿಗಳಲ್ಲಿ 5 ಅಥವಾ 10 ಮನೆಗಳು ಇದ್ದ ಪಕ್ಷದಲ್ಲಿ ಇಲ್ಲಿಗೆ ಏಕೆ ಪ್ರಯಾರಿಟಿ ಕೊಡುತ್ತೀರಾ ಎಂದು ಟೀಕೆಯನ್ನು ಮಾಡುತ್ತಾರೆ. ಯಾವುದೇ ಗ್ರಾಮಗಳು ಸಂಪರ್ಕ ವ್ಯವಸ್ಥೆಯಿಂದ

ಎಷ್ಟೇ ದೂರದಲ್ಲಿ ಇರಲಿ ಈ 1,600 ಗ್ರಾಮಗಳು ಏನು ಇವೆ ಇವುಗಳಲ್ಲಿ 50 ಮನೆ ಇರಲಿ, 100 ಮನೆ ಇರಲಿ 1 ಸಾವಿರದವರೆಗೆ ಜನಸಂಖ್ಯೆ ಇರುವ ಗ್ರಾಮಗಳಿಗೆ ಆದ್ಯತೆ ಕೊಟ್ಟು ಮಾಡಬೇಕೆಂದು ಮನಸ್ಸು ಇದೆ. ಇದಕ್ಕೆ ಹಣವನ್ನು ಕೂಡಿಸುವುದಕ್ಕೆ ಒದ್ದಾಡುತ್ತಿದ್ದೇವೆ.

ಶ್ರೀ ಎನ್. ಚಿಕ್ಕೇಗೌಡ.— ಇವತ್ತು ಯಾವ ಊರುಗಳಿಗೆ ಸಂಪರ್ಕ ವ್ಯವಸ್ಥೆ ಇಲ್ಲ ಅಲ್ಲಿಗೆ ರಸ್ತೆ ಮಾಡಲು 50 ಕೋಟಿ ಬೇಕೆಂದು ಹೇಳಿದಿರಿ. ತಾವು ನಗರ ಮತ್ತು ಪಟ್ಟಣಗಳಲ್ಲಿ ಇರುವ ರಾಷ್ಟ್ರೀಯ ಹೆದ್ದಾರಿಗಳಿಗೆ ಹೆಚ್ಚು ಆದ್ಯತೆ ಕೊಟ್ಟು ದೇಶದ ಸಂಪತ್ತನ್ನು ಹೆಚ್ಚು ಮಾಡಬೇಕೆಂದು ಮಾಡಿದ್ದೀರಾ ? ಅಥವಾ ದೇಶದ ಸಂಪತ್ತನ್ನು ಉತ್ಪಾದನೆ ಮಾಡತಕ್ಕ ಹಳ್ಳಿಗಳಲ್ಲಿರುವ ರೋಗಗ್ರಸ್ಥ ಜನರು ಅಲ್ಲಿಂದ ಪಟ್ಟಣ ಗಳಲ್ಲಿನ ಆಸ್ಪತ್ರೆಗಳಿಗೆ ಬರಬೇಕಾಗಿರುವ ರಸ್ತೆಗಳನ್ನು ನಿರ್ಮಾಣ ಮಾಡಬೇಕೆಂದು ಮಾಡಿದ್ದೀರಾ ಈ ಬಗ್ಗೆ ರಸ್ತೆಗಳಿಗೆ 50 ಕೋಟಿ ರೂಪಾಯಿ ಏನು ಬೇಕು ಎಂದು ಹೇಳುತ್ತಿದ್ದೀರಿ ಆದನ್ನು ಪ್ರತ್ಯೇಕವಾಗಿ ಇಟ್ಟು ತೆಗೆದುಕೊಳ್ಳುತ್ತೀರಾ ? ಈ ರೀತಿ ಪ್ರತ್ಯೇಕ ಹಣ ಇಡುವ ವ್ಯವಸ್ಥೆ ಹೊರದೇಶಗಳಲ್ಲಿ ಇದೆ. ವಾಹನಗಳ ಮೇಲೆ ಹಾಕತಕ್ಕ ತೆರಿಗೆಯಿಂದ ಪ್ರತ್ಯೇಕವಾಗಿ ಹಣವನ್ನು ಇಟ್ಟು ಹಳ್ಳಿಗಳ ರಸ್ತೆ ಯನ್ನು ಉದ್ಧಾರ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಮೋಟಾರ್ ವಾಹನಗಳ ಮೇಲಿನ ಟ್ಯಾಕ್ಸ್ ಈ ರಸ್ತೆಗಳಿಗೆ ಬರುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಮತ್ತು ಎಂ.ಡಿ.ಆರ್. ರಸ್ತೆಗಳಿಗೆ ಹೋಗುತ್ತದೆ. ಇವತ್ತು ಆ ರಸ್ತೆಗಳಲ್ಲಿಯೂ ಕೂಡ ಸಂಚಾರ ವ್ಯವಸ್ಥೆ ಹೆಚ್ಚಾಗಿದೆ. ಹಿಂದೆ ಒಂದು ರಸ್ತೆಯಲ್ಲಿ 10 ವಾಹನಗಳು ಹೋಗುತ್ತಿದ್ದರೆ; ಇವತ್ತು 10–20 ಪಟ್ಟು ಜಾಸ್ತಿಯಾಗಿವೆ. 6 ಟನ್ ಸಾಗಿಸುವಂತಿದ್ದ ವ್ಯವಸ್ಥೆ ಇವತ್ತು 15 ಟನ್ ಏರಿದೆ. ಇದು ಮೆಂಟೇನೆನ್ಸ್‌ಗಾಗಿ ಸುಮಾರು 35 ಕೋಟಿ ರೂಪಾಯಿ ಬೇಕಾಗುತ್ತದೆ. ಕಚ್ಚಾ ಸಂಪರ್ಕ ಇಲ್ಲದೇ ಇರತಕ್ಕ ಹಳ್ಳಿಗಳಿಗೆ ಮತ್ತು ಕಚ್ಚಾ ರಸ್ತೆಗಳಿಗೆ ಹೊಸ ವಿಧಾನದಲ್ಲಿ ಹಣ ಬರುವಂಥ ವ್ಯವಸ್ಥೆ ಮಾಡಿದರೆ ರಸ್ತೆಗಳನ್ನ ಮಾಡುವುದಕ್ಕೆ ಸಾಧ್ಯತೆ ಆಗುತ್ತದೆಂದು ಪರಿಶೀಲನೆ ಮಾಡಬೇಕಾಗಿದೆ. ಮಾರಾಟಕ್ಕೆ ತೆರಿಗೆಯಿಂದ ಬಂದಿರುವ ಹಣ 15 ಕೋಟಿ ಇದೆ; ಆದನ್ನು ಈ ರಸ್ತೆಗಳಿಗೆ ಖರ್ಚು ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಭೈರೇಗೌಡ.— ಸ್ವಾಮಿ, ನಮಗೆ ಮುಂದೆ ಎಲ್ಲಾದರೂ ಜಾಗ ಮಾಡಿಕೊಡಿ.

ಅಧ್ಯಕ್ಷರು.— ನೀವು ಈಗಲೇ ಎದ್ದಿರೋದು.

ಶ್ರೀ ಬಿ. ಪಾಟೀಲ್.— ಸ್ವಾಮಿ, ಹಿಂದೆ ಕಚ್ಚಾ ರಸ್ತೆಯಲ್ಲಿ ಓಡಾಡುವಂಥ ವಾಹನಗಳಿಗೆ ಬೇರೆ ಟ್ಯಾಕ್ಸ್ ಹಾಕುತ್ತಿದ್ದರು. ಈಗ ಒಂದೇ ರೀತಿಯಾದ ಟ್ಯಾಕ್ಸ್ ಹಾಕುತ್ತಿದ್ದಾರೆ. ಈ ಹಣವನ್ನು ಮೀಸ ಲಾಗಿಟ್ಟು, ಪ್ರತಿ ತಾಲ್ಲೂಕಿಗೂ, ಪ್ರತಿ ಜಿಲ್ಲೆಗೂ ಇಂತಿಷ್ಟು ಕಿಲೋಮೀಟರು ಒಳ್ಳೆಯ ರಸ್ತೆಗಳನ್ನು ಮಾಡು ವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಒಂದೇ ಮಾತಿನಲ್ಲಿ ಹೇಳುವುದಾದರೆ, ಇವತ್ತು ರಾಜ್ಯ ಸರ್ಕಾರದ ಗುರಿ ಇರುವುದು ಹೆಚ್ಚು ಆದ್ಯತೆಯನ್ನು ನೀರಾವರಿಗೆ ಕೊಡಬೇಕೆಂಬುದನ್ನು ಸ್ಪಷ್ಟವಾಗಿ ಹಾಗೂ ನಿಖರವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿರುವ ಜಲಸಂಪತ್ತನ್ನು ಉಪಯೋಗ ಮಾಡಿ ಕೊಳ್ಳಬೇಕಾಗಿದೆ. ಹಿಂದೆ ರಿವಾಲ್ವಿಂಗ್ ಫಂಡ್ ವಸೂಲು ಮಾಡಿರುವುದರ ಬಗ್ಗೆ ಕೋರ್ಟಿಗೆ ಹೋಗಿ ತಕರಾರು ಆಗಿರುವುದರಿಂದ ಅದು ಸ್ಥಗಿತವಾಗಿದೆ. ಮತ್ತೆ ಬೇರೆ ರೀತಿಯ ವ್ಯವಸ್ಥೆಯನ್ನು ಮಾಡಿಕೊಳ್ಳ ಬೇಕಾಗಿದೆ. ನಮ್ಮ ಜನಗಳು ದೋಣಿಯಲ್ಲಿ ಹೋಗಬೇಕಾದರೆ, 4–5 ರೂಪಾಯಿ ಕೊಟ್ಟು ಹೋಗಿ ಪ್ರಾಣಕ್ಕೆ ಆಪಾಯ ತಂದುಕೊಳ್ಳುತ್ತಾರೆ. ಒಂದು ಸೇತುವೆ ಕಟ್ಟಿಸುತ್ತೇವೆಂದರೆ ಯಾರೂ ಹಣ ಕೊಡು ವುದಿಲ್ಲ. ಈಗ ಇರತಕ್ಕ ಹಣವನ್ನು ಬೇರೆ ಕಡೆಗೆ ಬಳಸುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಭೈರೇಗೌಡ.— ಮುಂದುವರೆದ ದೇಶಗಳಲ್ಲಿ ಉದ್ದವ ರಸ್ತೆಗಳನ್ನು ಖಾಸಗಿಯವರಿಗೆ ವಹಿಸುತ್ತಾರೆ. ಇಲ್ಲೂ ಕೂಡ ಅಂಥ ವ್ಯವಸ್ಥೆ ಮಾಡುತ್ತೀರಾ ? ಹಳ್ಳಿ ರಸ್ತೆಗಳನ್ನು ಸಂಪೂರ್ಣವಾಗಿ ಸರ್ಕಾರದವರೇ ಇಟ್ಟುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತಿರಾ ? ಹೆಚ್ಚು ಭಾಗದ ಹಣವನ್ನು ಗ್ರಾಮಾಂತರ ಪ್ರದೇಶಗಳ ರಸ್ತೆಯ ಮೇಲೆ ಖರ್ಚು ಮಾಡುವುದಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ಮಾನ್ಯ ಸದಸ್ಯರು ಬಹಳ ದೊಡ್ಡ ಪ್ರಶ್ನೆಯನ್ನು ಕೇಳಿದ್ದಾರೆ. ನನ್ನ ವ್ಯಾಪ್ತಿಗೂ ಮೀರಿದ್ದು. ನಮ್ಮಲ್ಲಿ ಅಂಥ ಒಂದು ವಾತಾವರಣವನ್ನು ನಿರ್ಮಾಣ

ಮಾಡಲಿಕ್ಕೆ ಸಿದ್ಧರಿಲ್ಲ. ನಾನು ಕೂಡ ಹೋಗಿ ನೋಡಿಕೊಂಡು ಬಂದಿದ್ದೇನೆ. ದೊಡ್ಡ ದೊಡ್ಡ ರಸ್ತೆಗಳನ್ನೂ ಸೇತುವೆಗಳನ್ನೂ ಸಂಚಾರ ಸೌಲಭ್ಯಕ್ಕೆ ಒಳಪಡಿಸಿದ ಮೇಲೆ ಪ್ರತಿಯೊಂದು ಕಡೆಯೂ 50 ರಿಂದ 100 ರೂಪಾಯಿಗಳ ವರೆಗೆ ತೆರಿಗೆ ಹಾಕುತ್ತಾರೆ. ಇಲ್ಲೂ ಕೂಡ ಅಂಥ ಒಂದು ವಾತಾವರಣ ನಿರ್ಮಾಣ ಮಾಡಿದರೆ; ಬಂದಂಥ ಹಣವನ್ನು ಕೂಡಿಸಿಕೊಂಡು ರಸ್ತೆಗಳನ್ನು ಮಾಡಿಸುವುದಕ್ಕೆ ನಮ್ಮಲ್ಲಿ ಸಿಬ್ಬಂದಿ ಮತ್ತಿತರ ಸಲಕರಣೆಗಳು ಇವೆ.

ಶ್ರೀ ಎಂ. ಪುಟ್ಟಸ್ವಾಮಿಗೌಡ.— 134ನೇ ಪ್ರಶ್ನೆ ಕೇಳುತ್ತೇನೆ.

ವಿಷಯ : ಹೇಮಾವತಿ ಎಡದಂಡೆ ನಾಲೆಯಿಂದ ಆಗುತ್ತಿರುವ ನೀರಾವರಿ ಸೌಲಭ್ಯ.

ಪ್ರ. 198 (134) ಶ್ರೀ ಎಂ. ಪುಟ್ಟಸ್ವಾಮಿಗೌಡ (ಕೃಷ್ಣರಾಜಪೇಟೆ).— ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ಉತ್ತರಿಸುವರೇ ?

(ಅ) ಹೇಮಾವತಿ ಎಡದಂಡೆ ನಾಲೆಯು 125ನೇ ಕಿ.ಮೀ. ಉದ್ದದವರೆಗೆ ತಾಲ್ಲೂಕುವಾರು ಎಷ್ಟು ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ ;

(ಆ) ಈ ಪೈಕಿ ಈಗಾಗಲೇ ನೀರಾವರಿ ಸೌಲಭ್ಯ ಪಡೆದಿರುವ ಭೂಮಿ ಎಷ್ಟು ? (ತಾಲ್ಲೂಕುವಾರು) ;

(ಇ) ನಿರ್ದಿಷ್ಟ ಕಾರ್ಯಕ್ರಮದಂತೆ ಈ ಭಾಗದ ಕಾಮಗಾರಿಗಳು ಪೂರ್ಣವಾಗುತ್ತಿವೆಯೇ ? ಆಗದಿದ್ದರೆ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ತಾಲ್ಲೂಕುವಾರು ವಿವರಗಳು ಹೀಗಿವೆ (ಜೂನ್ 1983ರ ಕೊನೆಯವರೆಗೆ) (118 ಕಿ.ಮೀ.ವರೆಗೆ)

	ತಾಲ್ಲೂಕು	ಹೆಕ್ಟೇರುಗಳು
1.	ಹಾಸನ	745
2.	ಹೊಳೆನರಸೀಪುರ	3750
3.	ಚನ್ನರಾಯಪಟ್ಟಣ	7660
4.	ಕೃಷ್ಣರಾಜಪೇಟೆ	5135
	ಒಟ್ಟು	17290

(ಆ) ತಾಲ್ಲೂಕುವಾರು ವಿವರಗಳು ಹೀಗಿವೆ (ಜೂನ್ 1982ರ ಕೊನೆಯವರೆಗೆ) (100 ಕಿ.ಮೀ.ವರೆಗೆ)

	ತಾಲ್ಲೂಕು	ಹೆಕ್ಟೇರುಗಳು
1.	ಹಾಸನ	685
2.	ಹೊಳೆನರಸೀಪುರ	3332
3.	ಚನ್ನರಾಯಪಟ್ಟಣ	6288
	ಒಟ್ಟು	10305

ಇಲ್ಲಿ ಕಾರಣಗಳೇನೆಂದರೆ :

1. ಸಿಮೆಂಟಿನ ಅಭಾವ.
2. ಟೆಂಡರ್ ಕಂಟ್ರಾಕ್ಟ್‌ದಾರರು ಕೆಲ ಕೆಲಸಗಳನ್ನು ತೊರೆದಿರುವುದು.
3. ಶ್ರವಣಬೆಳಗೊಳದ ಪ್ರದೇಶದಲ್ಲಿ ಸಿದಿಮದ್ದು ಉಪಯೋಗಿಸಿ ಆಗೆಯುವುದನ್ನು ನಿಷೇಧಿಸಿರುವುದರಿಂದ ಆಗಿರುವ ಕೆಲಸದ ಪ್ರಗತಿಯ ನಿಧಾನಗತಿ.